ಗದ್ದೆಪುಣಿಯ ನಡುವಿನ ಓಟ, ತುಂಬಿ ಹರಿಯುತ್ತಿದ್ದ ನದಿ, ವೆಂಟೆಡ್ ಡ್ಯಾಮಿನ ಮೇಲಿನ ಇಷ್ಟೇ ಅಗಲದ ಪುಟ್ಟ ಎರಡಡಿ ನಡೆಯುವ ದಾರಿ, ತನ್ನ ಕೈ ಹಿಡಿದು ನಡೆಸುತ್ತಿದ್ದ ಗಿರಿಜೆ... ಗಿರಿಜೆ ಹೇಳುತ್ತಿದ್ದ ಗುಟ್ಟುಗಳು... ಒಂದೊಂದೇ ನೆನಪಾಗತೊಡಗಿತು. ಗಂಡ ಕೇದಾರ, 'ನೀನು ಹೋಗಿ ಬಾ ಇಂದು, ಮೇಘಂಗೆ ಸುಮ್ನೆ ತೊಂದ್ರೆ ಬೇಡ' ಎಂದಾಗ ಅನಿವಾರ್ಯವಾಗಿ ಒಬ್ಬಳೇ ಹೊರಟಿದ್ದಳು. ಸ್ಲೀಪರ್ ಬಸ್ಸು. ಸಿಂಗಲ್ ಸೀಟು ಆದ್ದರಿಂದ ಕರ್ಟನ್ ಅನ್ನು ಸರಿಯಾಗಿ ಆಚೆ ಕಾಣದಿರುವಂತೆ ಎಳೆದುಕೊಂಡು ತನ್ನ ಹಾಂಡ್ ಬ್ಯಾಗಿನ ಹ್ಯಾಂಡಲನ್ನು ಕೈಗೆ ಸುತ್ತಿಕೊಂಡು ಮಲಗುವ ಪ್ರಯತ್ನ ಮಾಡಿದಳು. 'ಜಾಸ್ತಿ ಚಿನ್ನ ತರಬೇಡ್ವೇ, ನಂದೇ ಇದೆ ಅಲ್ವಾ, ಅದ್ನೇ ಹಾಕಿದ್ರಾಯ್ತು' ಆಯಿ ಅಂದಿದ್ದರೂ ಹೊಸದಾಗಿ ಮಾಡಿಸಿದ್ದ ಮುತ್ತಿನ ಸರ ಝುಮುಕಿ, ತೋಡೆ ಹಾಕದೇ ಇದ್ರೆ ಹೇಗೆ ಎನ್ನುವ ಯೋಚನೆಯಿಂದ ತೆಗೆದಿಟ್ಟಿದ್ದಳು. ಬಸ್ಸಿನ ಮುಲುಕಾಟಕ್ಕೆ ನಿದ್ದೆ ಬಾರದೇ ಇನ್ನು ಹೊರಳಿದ್ದು ಸಾಕೆಂದು ಎದ್ದು ಕೂತರೆ ಕಣ್ಣಿನ ಮುಂದೆ ತನ್ನದೇ ಬದುಕಿನ ಚಿತ್ರಗಳು... ದಾದಾನ ಕೊನೇ ತಮ್ಮ ವಿಠ್ಠು ಕಕ್ಕ, ರವಿ ಎಲ್ಲ ನೆನಪಿನ ಓಕುಳಿಯಲ್ಲಿ... ಪುಟ್ಟ ರವಿಗೆ ಈಗ ಮದ್ವೆ... ವಿಠು ಕಕ್ಕ ಉಳಿದ ಕಕ್ಕಂದಿರಿಗಿಂತ ಎಲ್ಲ ಮಕ್ಕಳಿಗೆ ಆಪ್ತ. ಅವನಲ್ಲಿನ ಹೆಂಗುರುಳು ಸದಾ ಜಾಗ್ರತ. ಆಸ್ತಿ ಪಾಲಿನ ವಿಷಯದಲ್ಲಿ ಅಣ್ಣಂದಿರ ಕಡೆಗೆ ಸ್ವಲ್ಪ ಮುನಿಸಿದ್ದರೂ ಎಲ್ಲ ಅತ್ತಿಗೆಯಂದಿರಲ್ಲಿ ಸ್ನೇಹಭಾವದಿಂದ ನಡೆದುಕೊಳ್ಳುವವ, ಅದರಲ್ಲೂ ಮಕ್ಕಳೊಂದಿಗೆ ವಿಶೇಷ ಸ್ನೇಹದಿಂದ ನಡೆದುಕೊಳ್ಳುತ್ತಿದ್ದ. ಇಂದುವಿಗೆ ಆ ಕ್ಷಣದಲ್ಲಿ ಕಕ್ಕನ ಮುಖದೊಂದಿಗೆ ಗಿರಿಜೆಯ ಮುಖವೂ ಮನದಲ್ಲಿ ಮೂಡಿ ಬಂತು.

★★★

ಗಿರಿಜೆ ಮತ್ತು ಇಂದುಮತಿ ಎಂಟನೇ ಕ್ಲಾಸಿನ ತನಕವೂ ಜೊತೆಯಲ್ಲಿ ಓದಿದ್ದು. ಬೆಳದಿಂಗಳ ನಗುವಿನ ಗಿರಿಜೆ ಇಂದುವಿಗೆ ಹೀಗೆ ನಿತ್ಯದ ಸಂಗಾತಿ. ತೋಟದ ಕೆಲಸಕ್ಕೆ ಬರುತ್ತಿದ್ದ ಬಾಬುವಿನ ಎಂಟು ಮಕ್ಕಳಲ್ಲಿ ಕೊನೆಯವಳು. ಇಂದುವಿಗೆ ಗಿರಿಜೆಯೆಂದರೆ ಏನೋ ವಿಶೇಷ. ತನಗೆ ಹೆಣ್ಣುಲೋಕದ ಕೆಲವು ಗುಟ್ಟುಗಳನ್ನು ಹೇಳಿದ ಜ್ಞಾನಿಯೆಂದು ಅಭಿಮಾನ. ತನ್ನಿಂದ ತುಂಬಾ ಪ್ರಬುದ್ಧೆ ಎಂದು ಅವಳು ಹೇಳಿದ್ದನ್ನು ಭಕ್ತಿಯಿಂದ ಕೇಳುತ್ತಿದ್ದಳು ಇಂದು. ವಯಸ್ಸಿನಲ್ಲೂ ಗಿರಿಜೆ ಇಂದುಮತಿಗಿಂತ ಮೂರು ವರ್ಷಕ್ಕೆ ದೊಡ್ಡವಳೇ. ತುಂಬಿದೆದೆಯ ಗಿರಿಜೆ ಅತ್ತಿತ್ತ ಹೋದರೆ ಹತ್ತನೆಯ ತರಗತಿಯ ಹುಡುಗರ ಕಣ್ಣು ಅತ್ತಲೇ ಹೋಗುತ್ತಿದ್ದುದನ್ನು ಇಂದು ಗಮನಿಸಿದ್ದಳು. ನಾಲ್ಕು ಮೈಲಿ ನಡೆದು ಹೋಗಬೇಕಿದ್ದ ಶಾಲೆಗೆ ಹೋಗಿ ಬರುವಾಗ ಇಂದುವಿಗೆ ಗಿರಿಜೆಯೇ ಸಾರಥಿ. ಶಾಲೆಯಿಂದ ವಾಪಸು ಬರುವ ಹೊತ್ತಲ್ಲಿ ನಡುವೆ ಗುಡ್ಡೆಯೇರಿ ಕೇಪುಳೆ ಹಣ್ಣನ್ನು ಕೊಯ್ಯುವಾಗ ನೊರೆಯಿದ್ದ ಹಣ್ಣನ್ನು ತಿಳಿಯದೇ ಕೊಯ್ದು ತಿನ್ನುವ ಮೊದಲೇ ಕೈಯಿಂದ ಕಸಿದು ನೆಲಕ್ಕೆ ಹಾಕಿದವಳು. 'ಬಿಸಾಡಿ ಬಿಡಿ ಇಂದಮ್ಮ, ಅದು ವಿಷ ಮುಟ್ಟಿದ್ದು' ಎನ್ನುವ ಜ್ಞಾನ ನೀಡಿದವಳು. ಕೇರೆಹಾವಿನ ಬಾಲಕ್ಕೆ ಜಡೆ ಮುಟ್ಟಿಸಿದರೆ ನೆಲ ಮುಟ್ಟುವಷ್ಟು ಉದ್ದ ಜಡೆ ಬರುತ್ತದೆ ಎನ್ನುವ ಸಂಶೋಧನೆಯನ್ನು ಇಂದುವಿನ ಮುಂದಿಟ್ಟವಳು. ಇಳಿಸಿದ ಚಾವಡಿಯ ಮೂಲೆಯಿಂದ ಇಲಿ ಹಿಡಿಯಲು ಬಂದು ಮೆಲ್ಲನೆ ಸರಿದು ಹೋಗುತ್ತಿದ್ದ ಕೇರೆ ಹಾವಿನ ಬಾಲಕ್ಕೆ ಜಡೆಯ ತುದಿಯನ್ನು ಮುಟ್ಟಿಸಲು ಹೋಗಿ ಬಿದ್ದು ಅಮ್ಮನಿಂದ ಬೈಗುಳ ಕೇಳಿದ್ದು ಇಂದುವಿನ ಮನದಲ್ಲಿ ಹಸಿರಾಗಿತ್ತು. ಶಾಲೆಗೆ ಹೋಗಿ ಬರುವ ಹೊತ್ತಿನಲ್ಲಿ ಗಿರಿಜೆ, ಇಂದುವಿನ ಪ್ರಪಂಚವನ್ನು ಹಿರಿದಾಗಿಸಿದವಳು. ಆ ಹೊತ್ತು ಇಂದುವಿಗೆ ಖುಷಿಯ ಹೊತ್ತು. ತನಗಿಲ್ಲದ ಏನೋ ಒಂದು ವಿಷಯ ಗಿರಿಜೆಗೆ ಗೊತ್ತಿದೆ ಮತ್ತು ಇವತ್ತು ಅದನ್ನು ಗಿರಿಜೆ ನಂಗೂ ಹೇಳುವವಳಿದ್ದಾಳೆ ಎನ್ನುವ ಕುತೂಹಲ ಪ್ರತೀದಿನ! ಗಿರಿಜೆಯೂ ಇಂದುವನ್ನು ತುಂಬಾ ನಿರಾಸೆಗೊಳಿಸಿರಲಿಲ್ಲ. ತಾನು ಮೊದಲ ಬಾರಿಗೆ ಮುಟ್ಟಾದ ದಿನ ಯಾರಿಗೂ ಗೊತ್ತಾಗುವ ಅಗತ್ಯವಿಲ್ಲವೆಂದು ಆಯಿ ಮುಚ್ಚಿಟ್ಟರೂ ನಿತ್ಯದ ಕೆಲಸದ ಆಳು ಕಮಲಿಯ ಕಣ್ಣಿಗೆ ಬಿದ್ದೇ ಇತ್ತು. ಕಮಲಿಗೆ ಗೊತ್ತಾದರೆ ಆ ವಿಷಯ ಮೈಕಿನ